# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ: ತುವಿ:ಶೈವಿ:PG:ಪಠ್ಯಕ್ರಮ:2022-23:3447 ದಿನಾಂಕ: 26.09.2022

## ಅಧಿಸೂಚನೆ

ವಿಷಯ: ಎಂ.ಎಸ್. ಕಮ್ಯೂನಿಕೇಷನ್ ಕೋರ್ಸ್‌ನ ಶಿರೋನಾಮೆ ಬದಲಾವಣೆ ಮತ್ತು ವಿಜ್ಞಾನ ನಿಕಾಯದಿಂದ ಕಲಾ ನಿಕಾಯಕ್ಕೆ ವರ್ಗಾಹಿಸುವುದರ ಕುರಿತು.

ಉಲ್ಲೇಖ : 1) ಅಧ್ಯಕ್ಷರು, ಸ್ನಾತಕೋತ್ತರ ಎಂ.ಎಸ್. ಕಮ್ಯೂನಿಕೇಷನ್ ಅಧ್ಯಯನ ಮಂಡಳಿ ಇವರ ಪತ್ರ ದಿನಾಂಕ:21.06.2022

2) ದಿನಾಂಕ:26.08.2022 ರಂದು ನಡೆದ ವಿದ್ಯಾ ವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ನಿರ್ಣಯ

3) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 15.09.2022 (ಕಂಡಿಕೆ:73 ಪುಟ ಸಂಖ್ಯೆ:19)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಮನವಿಯಲ್ಲಿ ಎಂ.ಎಸ್. ಕಮ್ಯೂನಿಕೇಷನ್ ಅಧ್ಯಯನ ಮಂಡಳಿ ದಿನಾಂಕ: 21.06.2022 ರಂದು ಸಭೆ ನಡೆಸಿ ಕೋರ್ಸ್‌ನ ಶಿರೋನಾಮೆ (ನಾಮಕ್ಲೇಚರ್) ಬದಲಾವಣೆ – ಎಂ.ಎಸ್. ಕಮ್ಯೂನಿಕೇಷನ್ ಎಂದಿರುವ ಶಿರೋನಾಮೆಯನ್ನು ಯು.ಜಿ.ಸಿ. ಪತ್ರದನ್ವಯ 'ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ' ಎಂದು ಮುಂದಿನ ಶೈಕ್ಷಣಿಕ ಅವಧಿಯಲ್ಲಿ ಹೆಸರಿಸಬೇಕೆಂದು ಹಾಗೂ ಎಂ.ಎಸ್. ಕಮ್ಯೂನಿಕೇಷನ್ ವಿಭಾಗವು ವಿಜ್ಞಾನ ನಿಕಾಯದಲ್ಲಿದ್ದು ಇನ್ನು ಮುಂದೆ ಕಲಾ ನಿಕಾಯಕ್ಕೆ ವರ್ಗಾಹಿಸಬೇಕೆಂದು ಅಧ್ಯಯನ ಮಂಡಳಿಯ ಸಭೆಯ ನಡಾವಳಿಯನ್ನು ವಿಶ್ವವಿದ್ಯಾನಿಲಯಕ್ಕೆ ಉಲ್ಲೇಖ(1)ರಲ್ಲಿ ಸಲ್ಲಿಸಿರುತ್ತಾರೆ.

ಸದರಿ ಮನವಿಯ ಕುರಿತು ಯು.ಜಿ.ಸಿ. ಪತ್ರದನ್ವಯ ಎಂ.ಎಸ್. ಕಮ್ಯೂನಿಕೇಷನ್ ಎಂದಿರುವ ಶಿರೋನಾಮೆಯನ್ನು 'ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ' ಎಂದು ಬದಲಾವಣೆ ಮಾಡಲು ಹಾಗೂ ಸದರಿ ವಿಭಾಗವನ್ನು ಕಲಾ ನಿಕಾಯಕ್ಕೆ ಸೇರಿಸುವ ಕುರಿತು ಉಲ್ಲೇಖ(2)ರಲ್ಲಿನ ಸಕ್ಷಮ ಪ್ರಾಧಿಕಾರಗಳು ಅನುಮೋದಿಸಿರುತ್ತವೆ.

ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಉಲ್ಲೇಖ(2)ರಲ್ಲಿನ ಸಕ್ಷಮ ಪ್ರಾಧಿಕಾರಗಳ ನಿರ್ಣಯದನ್ವಯ ಎಂ.ಎಸ್. ಕಮ್ಯೂನಿಕೇಷನ್ ಎಂದಿರುವ ಶಿರೋನಾಮೆಯನ್ನು 'ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ' ಎಂದು ಬದಲಾವಣೆ ಮಾಡಿ ಹಾಗೂ ಸದರಿ ವಿಭಾಗವನ್ನು ವಿಜ್ಞಾನ ನಿಕಾಯದಿಂದ ಕಲಾ ನಿಕಾಯಕ್ಕೆ ಸೇರಿಸಲಾಗಿದೆ, ಎಂದು ಈ ಮೂಲಕ ಅಧಿಸೂಚನೆ ಹೊರಡಿಸಲಾಗಿದೆ.

ಆದೇಶದ ಮೇರೆಗೆ

ಕುಲಸಚಿವರು 29.9.22

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ

ಗೆ,

1. ಅಧ್ಯಕ್ಷರು / ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಘಟಕ ಹಾಗೂ ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- **ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.**
4. ಕಚೇರಿ ಪ್ರತಿ.